

ಸ್ಮೃತಿ ಮಂದಾನ ಅಣ್ಣನ ಆಟವನ್ನು ನೋಡಿ ತಾನೂ ಕ್ರಿಕೆಟಿಗಳಾಗಬೇಕು ಎನ್ನುವ ತುಡಿತ ಮತ್ತಷ್ಟು ಹೆಚ್ಚಾಯಿತು. ನಂತರದ ಎರಡು ವರ್ಷಗಳಲ್ಲಿಯೇ ಅವರು ತಮ್ಮ ಕನಸಿನ ಸಾಕಾರಕ್ಕೆ ಮೊದಲ ಹೆಜ್ಜೆಯಿರಿಸಿ ಮಹಾರಾಷ್ಟ್ರದ 15 ವರ್ಷದ ಒಳಗಿನವರ ತಂಡದಲ್ಲಿ ಸ್ಥಾನ ಪಡೆದುಕೊಂಡರು.

ಮೇಲಿಂದ ಮೇಲೆ ಕ್ರಿಕೆಟ್ ಪಂದ್ಯಗಳನ್ನಾಡುತ್ತಿದ್ದರೂ ಸ್ಮೃತಿ ಸಾಧನೆಯನ್ನು ಜನ ಕಣ್ಣರಳಿಸಿಕೊಂಡು ನೋಡುವಂತಾಗಿದ್ದು 2013ರ ಅಕ್ಟೋಬರ್‌ನಲ್ಲಿ. ಆಗ 19 ವರ್ಷದ ಒಳಗಿನವರ ದೇಶಿ ಕ್ರಿಕೆಟ್‌ನ ಪಶ್ಚಿಮ ವಲಯದ ಟೂರ್ನಿಯ ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಬಾರಿಸಿದ ದೇಶದ ಮೊದಲ ಆಟಗಾರ್ತಿ ಎನಿಸಿದರು. ಮಹಾರಾಷ್ಟ್ರ ತಂಡ ಪ್ರತಿನಿಧಿಸಿದ್ದ ಅವರು ಗುಜರಾತ್ ವಿರುದ್ಧದ ಪಂದ್ಯದಲ್ಲಿ 150 ಎಸೆತಗಳಲ್ಲಿ ಪೇರಿಸಿದ ಅಜೇಯ 224 ರನ್‌ಗಳು ಅವರ ದೈತ್ಯ ಬ್ಯಾಟಿಂಗ್ ಶಕ್ತಿಗೆ ಸಾಕ್ಷಿಯಂತಿದೆ.

2016ರಲ್ಲಿ ಮಹಿಳಾ ಚಾಲೆಂಜರ್ ಟ್ರೋಫಿ ಟೂರ್ನಿಯಲ್ಲಿ ಭಾರತ ರೆಡ್ ತಂಡದ ಪರ ಆಡಿದ್ದ ಸ್ಮೃತಿ ಮೂರು ಅರ್ಧಶತಕ ಗಳಿಸಿದ್ದರಲ್ಲದೇ ಮಹತ್ವದ ಪಂದ್ಯದಲ್ಲಿ ಭಾರತ ಬ್ಲ್ಯೂ ಎದುರು ಅಜೇಯ ಅರ್ಧಶತಕ ಹೊಡೆದು ತಂಡಕ್ಕೆ ಟ್ರೋಫಿ ತಂದುಕೊಟ್ಟರು. ಆ ವರ್ಷದ ಟೂರ್ನಿಯಲ್ಲಿ ಒಟ್ಟು ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನ ಸಂಪಾದಿಸಿದ್ದರು. ರಾಷ್ಟ್ರೀಯ ತಂಡ ಮತ್ತು ದೇಶಿ ಟೂರ್ನಿಗಳಲ್ಲಿ ತೋರಿದ ಬ್ಯಾಟಿಂಗ್ ಶಕ್ತಿಯಿಂದಾಗಿ ಅದೇ ವರ್ಷ ಅವರಿಗೆ ವಿದೇಶ ಲೀಗ್ ವುಮೆನ್ ಬಿಗ್ ಬಾಷ್ ಟೂರ್ನಿಯಲ್ಲಿ ಆಡುವ ಅವಕಾಶ ಲಭಿಸಿತು. ಆ ಟೂರ್ನಿಯಲ್ಲಿ ಆಡುವ ಒಪ್ಪಂದಕ್ಕೆ ಸಹಿ ಹಾಕಿದ ಭಾರತದ ಇಬ್ಬರು ಆಟಗಾರ್ತಿಯರ ಪೈಕಿ ಸ್ಮೃತಿ ಮಂದಾನ ಕೂಡ ಒಬ್ಬರು. ಇನ್ನೊಬ್ಬರು ಹರ್ಮನ್‌ಪ್ರೀತ್ ಕೌರ್. 2018ರಲ್ಲಿ ಕಿಯಾ ಸೂಪರ್ ಲೀಗ್ (ಮಹಿಳಾ ಕ್ರಿಕೆಟ್ ಸೂಪರ್ ಲೀಗ್) ಟೂರ್ನಿಯಲ್ಲಿ ಆಡಲು ಅವಕಾಶ ಗಳಿಸಿದ ಮೊದಲ ಆಟಗಾರ್ತಿ ಎನಿಸಿದರು.

ವಿದೇಶಗಳಲ್ಲಿಯೂ ಸುದ್ದಿ ಮಾಡಿದ ಐಪಿಎಲ್ ಟೂರ್ನಿ ಮಹಿಳೆಯರಿಗೂ ನಡೆಯಬೇಕು ಎನ್ನುವ ಕೂಗು ಹಲವು ವರ್ಷಗಳಿಂದ ಕೇಳಿ ಬರುತ್ತಿದ್ದರೂ ಆರಂಭವಾಗಿದ್ದು ಮಾತ್ರ ಇತ್ತೀಚೆಗೆ. ಪುರುಷರ ಐಪಿಎಲ್ 2008ರಿಂದ ನಡೆಯುತ್ತಿದ್ದರೂ ಆರ್‌ಸಿಬಿ ಒಂದೇ ಒಂದು ಸಲ ಪ್ರಶಸ್ತಿ ಗೆದ್ದಿಲ್ಲ. ಹೀಗಾಗಿ ಪ್ರತಿ ಸಲ ಟೂರ್ನಿ ಆರಂಭವಾದಾಗಲೂ ‘ಈ ಸಲ ಕಪ್ ನಮ್ದೇ’ ಎನ್ನುವ ನಿರೀಕ್ಷೆಯ ಮಾತು ರೂಢಿಗತವಾಗಿ ಬಂದುಬಿಟ್ಟಿದೆ. ಆದರೆ ನನಸಾಗಿಲ್ಲ. ಕಳೆದ ವರ್ಷ ವುಮೆನ್ ಪ್ರೀಮಿಯರ್ ಲೀಗ್ ನಡೆದಾಗ ಆರ್‌ಸಿಬಿ ತಂಡ ಸ್ಮೃತಿ ಮಂದಾನ ಅವರನ್ನು ₹3.40 ಕೋಟಿಗೆ ಖರೀದಿ ಮಾಡಿ ತಂಡದ ನಾಯಕಿಯನ್ನಾಗಿಯೂ ಮಾಡಿತು. ಸಿಕ್ಕ ಪ್ರತಿ ಅವಕಾಶದಲ್ಲಿಯೂ ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತ ಬಂದಿರುವ ಮಹಾರಾಷ್ಟ್ರದ ಸ್ಮೃತಿ, ಆರ್‌ಸಿಬಿ ಫ್ರಾಂಚೈಸ್ ತಮ್ಮ ಮೇಲಿಟ್ಟಿದ್ದ ನಿರೀಕ್ಷೆ ನಿಜ ಮಾಡಿದರು. ತಮ್ಮ ನಾಯಕತ್ವದಲ್ಲಿ ಆರ್‌ಸಿಬಿ ಚಾಂಪಿಯನ್ ಆಗಲು ಪ್ರಮುಖ ಕಾರಣರಾದರು.

ಐಸಿಸಿ ಟಿ–20 ಅಂತರರಾಷ್ಟ್ರೀಯ ತಂಡದಲ್ಲಿ 2018 ಹಾಗೂ 2019ರಲ್ಲಿ ಸ್ಥಾನ ಪಡೆದುಕೊಂಡಿದ್ದರು. ಐದು ವರ್ಷಗಳ ಹಿಂದೆ ಅರ್ಜುನ ಪ್ರಶಸ್ತಿ ಲಭಿಸಿತ್ತು. 2019ರಲ್ಲಿ ಚುಟುಕು ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ 24 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ್ದರು. ಇತ್ತೀಚೆಗೆ ಬೆಂಗಳೂರಿನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಪಂದ್ಯಗಳಲ್ಲಿ ಸತತ ಎರಡು ಶತಕ ಮತ್ತು ಮತ್ತೊಂದು ಪಂದ್ಯದಲ್ಲಿ 90 ರನ್ ಬಾರಿಸಿದ್ದರು. ಈ ಸರಣಿ ಮೂಲಕ ಅವರು ಏಕದಿನ ಕ್ರಿಕೆಟ್‌ನಲ್ಲಿ ಸತತ ಎರಡು ಪಂದ್ಯಗಳಲ್ಲಿ ಶತಕ ಬಾರಿಸಿದ ಭಾರತದ ಮೊದಲ ಆಟಗಾರ್ತಿ ಎನ್ನುವ ಹೆಗ್ಗಳಿಕೆಗೂ ಪಾತ್ರರಾದರು.

ಹಲವು ದಶಕಗಳ ಹಿಂದೆಯಷ್ಟೇ ಸ್ವಂತ ಹಣ ಖರ್ಚು ಮಾಡಿಕೊಂಡು ಸುರಕ್ಷಿತವಿಲ್ಲದ ಜಾಗದಲ್ಲಿದ್ದುಕೊಂಡು ಕ್ರಿಕೆಟ್ ಪಂದ್ಯವಾಡಿ ಖಾಲಿ ಕೈಯಲ್ಲಿ ವಾಪಸ್ ಬರಬೇಕಾಗುತ್ತಿದ್ದ ಕ್ರಿಕೆಟ್ ಆಟಗಾರ್ತಿಯರ ಕೈ ತುಂಬಾ ಈಗ ಕಾಂಚಾಣ ಸದ್ದು ಮಾಡುತ್ತಿದೆ. ಸ್ಟಾರ್‌ಗಿರಿ, ಜಾಹೀರಾತು ಲೋಕದಲ್ಲಿ ಹೇರಳ ಅವಕಾಶ, ಪ್ರತಿಷ್ಠಿತ ನಿಯತಕಾಲಿಕೆಯ ಮುಖಪುಟಗಳಲ್ಲಿ ಸ್ಥಾನ, ಅಭಿಮಾನಿಗಳಿಂದ ಗೌರವ ಹೀಗೆ ಎಲ್ಲವೂ ಸಿಗುತ್ತಿದೆ. ಸ್ಮೃತಿ ಅವರಂಥ ಆಟಗಾರ್ತಿಯರಿಂದ ಮಹಿಳಾ ಕ್ರಿಕೆಟ್ ಹೊಸ ಮಗ್ಗಲು ದಾಟುತ್ತಿದೆ.

ಸ್ಮೃತಿ ಅಂತರರಾಷ್ಟ್ರೀಯ ಕ್ರಿಕೆಟ್ ಬದುಕಿಗೆ ಪದಾರ್ಪಣೆ ಮಾಡಿ ಹತ್ತು ವರ್ಷಗಳು ಉರುಳಿದ್ದು ಈ ಅವಧಿಯಲ್ಲಿ ಅನೇಕ ಏಳುಬೀಳು ಕಂಡಿದ್ದಾರೆ. ಹಲವು ಬಾರಿ ಗಾಯದ ಸಮಸ್ಯೆಗಳನ್ನೂ ಎದುರಿಸಿದ್ದಾರೆ. ಬ್ಯಾಟಿಂಗ್ ಮೂಲಕವಷ್ಟೇ ಅಲ್ಲದೆ ಸೌಂದರ್ಯದ ಕಾರಣಕ್ಕೂ ಜನ ಅವರನ್ನು ಕಣ್ಣರಳಿಸಿ ನೋಡುವುದು ಗುಟ್ಟಾಗಿ ಉಳಿದಿಲ್ಲ.

ಹೀಗೆ ಹಂತಹಂತವಾಗಿ ಸಾಧನೆಯ ಶಿಖರ ಏರುತ್ತಿರುವ ಸ್ಮೃತಿ ಸದಾ ಪ್ರವಾಹದ ವೇಗದಲ್ಲಿ ರನ್ ಹೊಳೆ ಹರಿಸುತ್ತಿರಬೇಕು. ಐಸಿಸಿ ಪ್ರಶಸ್ತಿ ಪಡೆದಾಗ ಸಚಿನ್ ಹೇಳಿದ್ದ ‘ಸದಾ ಅತ್ಯುತ್ತಮವಾದದ್ದನ್ನು ನೀಡುತ್ತಲೇ ಇರಿ ಮತ್ತು ಹೊಸ ಎತ್ತರಗಳನ್ನು ಏರುತ್ತಲೇ ಇರಿ’ ಎನ್ನುವ ಮಾತು ಅವರ ಮನದಲ್ಲಿ ಅಚ್ಚೊತ್ತಿದ್ದರೆ ಕ್ರಿಕೆಟ್ ಪ್ರೇಮಿಗಳಿಗೂ ಭರ್ಜರಿ ರನ್ ಹೊಳೆಯ ರಸದೂಟ ಸಿಗುವುದರಲ್ಲಿ ಅನುಮಾನವೇನಿಲ್ಲ.

ಪ್ರತಿಕ್ರಿಯಿಸಿ: feedback@sudha.co.in